ದಿನಾಂಕಃ 15.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಬಿ ಎ ಪದವಿಯನ್ನು ಪಡೆದಿದ್ದೇನೆ. ನಾನು ವ್ಯವಸಾಯವನ್ನು ಮಾಡುತ್ತೇನೆ. ನನ್ನ ತಂದೆಯ ಹೆಸರು ಜನ್ನಪ್ಪ ಮತ್ತು ತಾಯಿಯ ಹೆಸರು ಪುಟ್ಟಮ್ಮ. ನನ್ನ ತಂದೆ ತಾಯಿಗೆ ಐದು ಜನ ಮಕ್ಕಳು. ನಾನು ಹಿರಿಯ ಮಗ ಎಂದರೆ ಸರಿ. ನನ್ನ ತಂದೆಯವರು ಜೀವಂತ ಇದ್ದಾಗ ಗೋಪಾಲಕೃಷ್ಣ ಎಂಬ ನನ್ನ ಸಹೋದರ ಆಸ್ತಿಯಲ್ಲಿ ಭಾಗ ಕೇಳಿದ್ದರು ಎಂದರೆ ಸರಿ. ಸದರಿ ಗೋಪಾಲಕೃಷ್ಣ ರವರು ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿ ನಿರ್ವಹಿಸುತಿದ್ದಾರೆ. ಗೋಪಾಲಕೃಷ್ಣ ರವರು ದಿಃ15.01.1998 ರಂದು ನೊಂದಾಯಿತಿವಲ್ಲದ ಪಾಲು ವಿಭಾಗ ಪತ್ರವನ್ನು ಮಾಡಿಕೊಂಡು ಅವರು ಒಟ್ಟು ಕುಟುಂಬದಿಂದ ಹೊರಗೆ ಹೋದರು ಎಂದರೆ ಸರಿ. ಅದಾದನಂತರ ನಾನು, ನನ್ನ ತಂದೆ ನನ್ನ ತಮ್ಮ ಕರೇಗೌಡ ಒಟ್ಟು ಕುಟುಂಬದಲ್ಲೇ ಇದ್ದೆವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕರೇಗೌಡ ರವರು ಸಹ ಪಾಲು ತೆಗೆದುಕೊಂಡು ಒಟ್ಟು ಕುಟುಂಬದಿಂದ ಹೊರಗೆ ಹೋದರು ಎಂದು ನುಡಿದಿರುತ್ತಾರೆ. ನಾನು ಮತ್ತು ಪ್ರತಿವಾದಿಯು ಒಟ್ಟು ಕುಟುಂಬದಲ್ಲಿ ಇದ್ದೆವು ಎಂದರೆ ಸರಿಯಲ್ಲ. ದಾವಾ ಸ್ವತ್ತು ಮತ್ತು ಇತರೆ ಆಸ್ತಿಗಳನ್ನು ನಾವು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದೆವು ಎಂದರೆ ಸರಿಯಲ್ಲ. ಗೋಪಾಲಕೃಷ್ಣ ರವರು ಒಟ್ಟು ಕುಟುಂಬದಿಂದ ಬೇರೆಯಾದಾಗ ನಾನು ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳುತಿದ್ದೇ ಎಂದರೆ ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯು ಸಹ ಒಟ್ಟು ಕುಟುಂಬದಿಂದ ದೂರ ಹೋದರು ಹಾಗೂ ನಾನು ನನ್ನ ತಂದೆ ತಾಯಿಯ ಜವಾಬ್ದಾರಿಯನ್ನು ತೆಗೆದುಕೊಂಡೆ ಎಂದು ನುಡಿದಿರುತ್ತಾರೆ. ದಿಃ21.03.2001 ರಲ್ಲಿ 1 ನೇ ಪರತಿವಾದಿರು ಹಾಗೂ 2012 ರಲ್ಲಿ ನನ್ನ ತಾಯಿ ಮೃತಪಟ್ಟರು. ಎರಡು ವರ್ಷಗಳ ಹಿಂದೆ ನನ್ನ ತಾಯಿಯ ಹೆಸರಿನಲ್ಲಿರುವ ಆಸ್ತಿಗಳನ್ನು ಪೌತಿ ಖಾತೆಯ ಮೇರೆಗೆ ನಮ್ಮಗಳ ಹೆಸರಿಗೆ ಮಾಡಿಕೆಂಡೆವು. 1998 ರ ನೊಂದಾಯಿವಲ್ಲದ ಪಾಲು ವಿಭಾಗ ಪತ್ರದಲ್ಲಿ ನನ್ನ ತಂದೆ ಮತ್ತು ತಾಯಿಗೆ ಜೀವನಾಂಶಕ್ಕೆ ನೀಡಿದ ಭಾಗವನ್ನು ಅವರ ಮರಣದ ನಂತರ ನನಗೆ ಮತ್ತು 1 ನೇ ಪರತಿವಾದಿಗೆ ಸೇರಬೇಕು ಎಂದು ನಮೂದಾಗಿದೆ ಎಂದರೆ ಸರಿ. ನಾನು ಹಾಗೂ 1ನೇ ಪರತಿವಾದಿಯವರು ಒಟ್ಟು ಕುಟುಂಬದಲ್ಲಿ ಇದ್ದ ಕಾರಣ ಸದರಿ ಪಾಲು ವಿಭಾಗ ಪತ್ರದಲ್ಲಿ ಮೇಲೆ ಹೇಳಿದಂತೆ ನಮೂದಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ನಾನು ಹಾಗೂ 1 ನೇ ಪ್ರತಿವಾದಿ 2002 ರಲ್ಲಿ ವಿಭಾಗ ಮಾಡಿಕೆಂಡೆವು ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ದಾವಾ ಎ, ಬಿ, ಸಿ ಸ್ವತ್ತುಗಳು 1 ನೇ ಪ್ರತಿವಾದಿಯ ಭಾಗಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ನಾನು ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿರುವುದಕ್ಕಾಗಿ ದಾವಾ ಸ್ವತ್ತುಗಳನ್ನು ನನ್ನ ಹೆಸರಿಗೆ ಪಡೆದುಕೊಂಡಿರುತ್ತೇನೆ ಹಾಗೂ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ

ಸರಿಯಲ್ಲ. ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯು ಸ್ವಾ ಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂ.1/9 ರ ಚಕ್ಕು ಬಂದಿ ಪೂರ್ವಕ್ಕೆ ಮಲ್ಲೇಶಪ್ಪನವರ ಮನೆ, ಪಶ್ಚಿಮಕ್ಕೆ ಸತೀಶ್ ಅವರ ನಿವೇಶನ, ಉತ್ತರಕ್ಕೆ ಹೊನ್ನೇಶಪ್ಪ ರವರ ನಿವೇಶನ, ದಕ್ಷಿಣಕ್ಕೆ ರಸ್ತೆ ಇದೆ. ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ಉತ್ತರಕ್ಕೆ ಹೊನ್ನೇಶಪ್ಪ ರವರ ನಿವೇಶನ, ಮರಡಿ ರಂಗೇಗೌಡರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಸರ್ವೆ ನಂ.168/5 ರ ಚಕ್ಕು ಬಂದಿ ಪೂರ್ವಕ್ಕೆ ಕುರಿಹೆಂಜಪ್ಪರವರ ತೋಟ, ಪಶ್ಚಿಮಕ್ಕೆ ಸರ್ವೆ ನಂ.167/5 ರ ಜಮೀನು ಇರುತ್ತದೆ, ಉತ್ತರಕ್ಕೆ ಹೊನ್ನೇಶಪ್ಪ ರವರ ತೋಟ, ದಕ್ಷಿಣಕ್ಕೆ ಹೊನ್ನೇಶಪ್ಪ ರವರ ತೋಟ ಇದೆ. ಪಶ್ಚಿಮಕ್ಕೆ ಹೊನ್ನೇಶಪ್ಪ ರವರ ತೋಟ ಮತ್ತು ರಸ್ತೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಸರ್ವೆ ನಂ.176/19 ರ ಚಕ್ಕು ಬಂದಿ ಪೂರ್ವಕ್ಕೆ ವೀರಮ್ಮ ಮತ್ತು ಈರಣಪ್ಪ ರವರ ಜಮೀನು, ಪಶ್ಚಿಮಕ್ಕೆ ಎಮ್ ಬಿ ಕರಿಯಣ್ಣ ಮತ್ತು ದೊಡ್ಡಪ್ಪಯ್ಯ ರವರ ಜಮೀನು, ಉತ್ತರಕ್ಕೆ ಹೊನ್ನೇಶಪ್ಪ ರವರ ತೋಟ, ದಕ್ಷಿಣಕ್ಕೆ ಚಿಕ್ಕಹೆಂಜಪ್ಪರವರ ಜಮೀನು ಇದೆ. ಪೂರ್ವಕ್ಕೆ ಸಣ್ಣಪ್ಪಯ್ಯನವರ ಜಮೀನು ಎಂದರೆ ಅವರು ಈರಣ್ಣಪ್ಪನವರ ಮಗ ಎಂದು ನುಡಿದಿರುತ್ತಾರೆ. ಪಶ್ಚಿಮಕ್ಕೆ ನನ್ನ ಜಮೀನು ಹಾಗು ರಸ್ತೆ ಎಂದರೆ ಸರಿಯಲ್ಲ. ಉತ್ತರಕ್ಕೆ ಹಂಪಯ್ಯನವರ ಕಟ್ಟೆ ಮತ್ತು ಸಿದ್ದಪ್ಪನವರ ಜಮೀನು ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಹೊನ್ನೇಶಪ್ಪ ರವರ ಜಮೀನು ಎಂದರೆ ಸರಿಯಲ್ಲ.

ನಾನು ದಾವಾ ಸ್ವತ್ತಿನಲ್ಲಿ ಸ್ವಾ ಧೀನದಲ್ಲಿ ಇಲ್ಲದ ಕಾರಣ ನನಗೆ ಸರಿಯಾದ ಚಕ್ಕು ಬಂಧಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರಿಗೆ ಸೇರಿದ ಜಮೀನನ್ನು ಒಡೆಯಲು ಸುಳ್ಳು ದಾವೆಯನ್ನು ಹೂಡಿ, ಸುಳ್ಳು ಸಾಕ್ಷಿಯನ್ನು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.